**<u>ದಿನಾಂಕ: 01.04.2025 ರಂದು ಸಾಕ್ಷಿ ಹಾಜರಿದ್ದು ಪ್ರಮಾಣಿಸಲಾಯಿತು.</u>**

<u>ಈ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹಿತ ದೃಷ್ಟಿಯಿಂದ ಮತ್ತು ವಾದಿ ಮತ್ತು ಪ್ರತಿವಾದಿ ಪರ ವಕೀಲರ ಹಿತ ದೃಷ್ಟಿಯಿಂದ, ಸಾಕ್ಷಿ ತಾನು ಯಾವ ರೀತಿ ಹೇಳಿಕೆ ನೀಡಿರುತ್ತಾರೆ ಎನ್ನುವುದನ್ನು ಪರಿಶೀಲಿಸಲು ಮತ್ತು ನಾನು ಈ ರೀತಿ ಹೇಳಿಕೆ ನೀಡಿಲ್ಲ ಎನ್ನುವುದನ್ನು ತಪ್ಪಿಸುವುದಕ್ಕಾಗಿ ಎರಡೂ ಬದಿಯಲ್ಲಿ ನೋಡಿಕೊಳ್ಳಲು ಎರಡೂ ಕಂಪ್ಯೂಟರ್ ಸ್ಕ್ರೀನ್ ಗಳನ್ನು ಅಳವಡಿಸಲಾಗಿದೆ.</u>

<u>**ಮುಂದುವರೆದ ಪಾಟೀ ಸವಾಲು:-** ವಾದಿ ಪರ ಶ್ರೀ. ಎಂ ಎನ್ ಎಸ್ ವಕೀಲರಿಂದ :-</u>

2. ನಾನು ನಮ್ಮ ತಂದೆಯ ಆಸ್ಪತ್ರೆಯ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಪಿ . ಒ . ಎ. ಬರೆದು ಕೊಡುವುದಕ್ಕಿಂತ ಮುಂಚೆ ನನಗೆ ದಾವಾ ಸ್ವತ್ತಿನ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಅಪಾರ್ಟಮೆಂಟ್ ಕಟ್ಟುವುದಕ್ಕೆ ಎಲ್ಲಾ ವ್ಯವಹಾರಗಳನ್ನು ನಮ್ಮ ತಂದೆಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ, ನಾನು ಸಹ ಅದರಲ್ಲಿ ಭಾಗವಹಿಸುತ್ತಿದ್ದೆ. ಆ ರೀತಿ ತಂದೆಯ ಜೊತೆ ಅಪಾರ್ಟಮೆಂಟ್ ಕಟ್ಟುವುದಕ್ಕೆ ಭಾಗವಹಿಸಿದ ಬಗ್ಗೆ ಮತ್ತು ಅಪಾರ್ಟಮೆಂಟ್ ಸಂಬಂಧಪಟ್ಟ ಕಟ್ಟುವುದಕ್ಕೆ ಭಾಗವಹಿಸಿದ್ದಲ್ಲಿ ಯಾವುದೇ ದಾಖಲೆ ಇರುವುದಿಲ್ಲ.

3. ನಮ್ಮ ಅಪಾರ್ಟಮೆಂಟ್ ಸರ್ವೆ ನಂ. 11/1 ಬ್ಯಾಟರಾಯನಪುರದಲ್ಲಿರುತ್ತದೆ ಎಂದರೆ ನಿಜ. ದಾವಾ ಸ್ವತ್ತು ಜಕ್ಕೂರು ಗ್ರಾಮಕ್ಕೆ ಸೇರಿದ ಸರ್ವೆ ನಂ. 100 ರಿಂದ 102 ರ ಸರ್ವೆ ನಂಬರ್ ನಲ್ಲಿ ಬರುತ್ತದೆ ಎನ್ನುವುದು ಸರಿಯಲ್ಲ. ನಿಮ್ಮ ಪ್ರಕಾರ ದಾವಾ ಸ್ವತ್ತು ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಆ ರೀತಿ ದಾವಾ ಸ್ವತ್ತು ಇರುವುದಿಲ್ಲ ಎಂದು ನುಡಿದಿರುತ್ತಾರೆ. ಜಕ್ಕೂರು ಗ್ರಾಮ ಸರ್ವೆ ನಂ. 100 ರಿಂದ 102 ರ ಸರ್ವೆ ನಂಬರ್ ಗಳಲ್ಲಿ ಸರ್ಕಾರದವರು ನಿವೇಶನಗಳನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ಕಾರದವರು ನಿವೇಶನಗಳನ್ನು ಅರ್ಜಿಗಳನ್ನು ಸಲ್ಲಿಸಿದವರಿಗೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನಿವೇಶನ

ಮಂಜೂರಾದ ವ್ಯಕ್ತಿಗಳು ನಿವೇಶನದಲ್ಲಿ ಮನೆ ಕಟ್ಟಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಜಕ್ಕೂರು ಗ್ರಾಮದ ಸರ್ವೆ ನಂ. 100 ರಿಂದ 102 ರ ಸರ್ವೆ ನಂಬರ್ ಗಳಲ್ಲಿ ನಮಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ.

4. ನಮ್ಮ ತಂದೆ ಓ ಎಸ್ 6700/1996 ನ್ನು ಸಿ ಎಂ ಸಿ ಬ್ಯಾಟರಾಯನಪುರ ವಿರುದ್ಧ ಹಾಕಿದ್ದರು ಎಂದರೆ ನಿಜ. ಅದು ನಮ್ಮಂತೆ ಆಗಿರುತ್ತದೆ ಎಂದರೆ ನಿಜ. ಸಿ ಎಂ ಸಿ ರವರು ತೀರ್ಪಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್ ಎಫ್ ಎ ಸಂ.1104/2006 ಸಲ್ಲಿಸಿದ್ದರು ಎಂದರೆ ನಿಜ. ಸದರಿ ತೀರ್ಪಿನಲ್ಲಿ ಮಾನ್ಯ ನ್ಯಾಯಾಲಯವು ಸರ್ವೆ ನಂ. 101 ರ ಉತ್ತರ ಭಾಗಕ್ಕೆ ಜಮೀನು ಇದ್ದರೆ ಅದರ ಮೇಲೆ ಪ್ರತಿವಾದಿ ಸಿ ಎಂ ಸಿ ರವರು ಕ್ರಮ ತೆಗೆದುಕೊಳ್ಳಬಹುದೆಂದು ಹೇಳಿರುತ್ತಾರೆ ಎಂದರೆ ನಿಜ. ಆರ್ ಎಫ್ ಎ ಸಂ.1104/2006 ಇತ್ಯರ್ಥ ಆದ ನಂತರ ನಾವು ಸರ್ಕಾರಕ್ಕೆ ಅರ್ಜಿ ಕೊಟ್ಟಿದ್ದೇವೆ ಎಂದರೆ ನಿಜ. ನಮ್ಮ ಅಪಾರ್ಟೆಮೆಂಟ್ ನ ಉತ್ತರ ಭಾಗಕ್ಕೆ ಇರುವ ಜಮೀನನ್ನು ನಮಗೆ ಕೊಡುವಂತೆ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ನಿಜ. ಅದನ್ನು ನಮಗೆ ಅಲಾಟ್ ಮಾಡುವಂತೆ ಆ ಅರ್ಜಿಯಲ್ಲಿ ಕೇಳಿಕೊಂಡಿರುತ್ತೇವೆ ಎಂದರೆ ನಿಜ. ಖರೀದಿ ಪತ್ರದ ಪ್ರಕಾರ ಬ್ಯಾಟರಾಯನಪುರ ಸರ್ವೆ ನಂ 11/1 ರಲ್ಲಿ 20 ಗುಂಟೆ ಖರೀದಿ ಮಾಡಿರುತ್ತೇವೆ ಎಂದರೆ ನಿಜ. ನಾವು ಸದರಿ ಪೂರ್ತಿ ಜಾಗದಲ್ಲಿ ಅಪಾರ್ಟೆಮೆಂಟ್ ಕಟ್ಟಿರುತ್ತೇವೆ ಎಂದರೆ ನಿಜ. ನಮ್ಮ ಅರ್ಜಿಯಂತೆ ನನಗೆ ಜಾಗವನ್ನು ಮಂಜೂರು ಮಾಡುವಂತೆ ಆದೇಶ ಆಗಿರುತ್ತದೆ. ಯಾವ ಸರ್ವೆ ನಂಬರ್ ನಲ್ಲಿ ಜಾಗ ಮಂಜೂರು ಆಗಿರುತ್ತದೆ ಎನ್ನುವುದು ಗೊತ್ತಿಲ್ಲ ಆದರೆ ಹೆಚ್ಚುವರಿ ಜಮೀನಿನಲ್ಲಿ ಜಾಗ ಮಂಜೂರು ಆಗಿರುತ್ತದೆ. ಸದರಿ ಹೆಚ್ಚುವರಿ ಜಾಗ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎನ್ನುವುದು ಗೊತ್ತಿಲ್ಲ. ಹೆಚ್ಚುವರಿ ಜಾಗ ನಮ್ಮ ಸ್ವತ್ತಿನ ಉತ್ತರಕ್ಕೆ 1.08 ಗುಂಟೆ ಇರುತ್ತದೆ.

5. ರೆವೆನ್ಯೂ ಇಲಾಖೆಯವರು ಸರ್ವೆ ಮಾಡಿರುತ್ತಾರೆ. ಆ ಬಗ್ಗೆ ಸರ್ವೆ ಸ್ಕೆಚ್ ಮಾಡಿರುವುದಿಲ್ಲ. ರೆವೆನ್ಯೂ ಇಲಾಖೆಯವರು ಅಳತೆ ಮಾಡಿ 1.08 ಗುಂಟೆ

ಇರುತ್ತದೆ ಎಂದು ದಾಖಲೆ ನೀಡಿರುವುದಿಲ್ಲ. ಯಾವ ಆಧಾರದ ಮೇಲೆ 1.08 ಗುಂಟೆ ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿದ ರಿಟ್ ಅರ್ಜಿಯಲ್ಲಿ ರೆವೆನ್ಯೂ ಇಲಾಖೆಯವರು ಸರ್ವೆ ಮಾಡಿ ಅಷ್ಟು ಅಳತೆಯ ಹೆಚ್ಚುವರಿ ಜಮೀನು ಇರುತ್ತದೆ ಎಂದು ಹೇಳಿರುತ್ತಾರೆ. ಆ ಬಗ್ಗೆ ನನ್ನ ಹತ್ತಿರ ದಾಖಲೆ ಇರುವುದಿಲ್ಲ. ಆ ರೀತಿ ದಾಖಲೆ ಇದ್ದರೆ ನ್ಯಾಯಾಲಯಕ್ಕೆ ಕೊಡಲು ನನಗೆ ಯಾವುದೇ ರೀತಿಯ ತೊಂದರೆ ಇಲ್ಲ. ಸರ್ವೆ ಆಗಿಲ್ಲ, ಯಾವುದೇ ಸ್ಕೆಚ್ ಆಗಿರುವುದಿಲ್ಲ, ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾನ್ಯ ಉಚ್ಛ ನ್ಯಾಯಾಲಯ ಆದೇಶದಂತೆ ನಮಗೆ ಇನ್ನೂ ಜಾಗವನ್ನು ನೀಡಿರುವುದಿಲ್ಲ. ಈಜ್ಮೆಂಟ್ ಗೊಸ್ಕರ ನಾವು ಯಾವುದೇ ದಾವೆ ಹಾಕಿರುವುದಿಲ್ಲ. ಜಕ್ಕೂರು ಗ್ರಾಮ ಸರ್ವೆ ನಂ. 100 ರಿಂದ 102 ಮತ್ತು ಬ್ಯಾಟರಾಯನ ಸರ್ವೇ ನಂ 11/1 ರ ಮಧ್ಯ ನಕ್ಷೆಯಂತೆ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ನಿಜ.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ದಾಖಲಿಸಿಕೊಳ್ಳಲಾಗಿದೆ.)

ಓ ಹೇ ಕೇ ಸರಿ ಇದೆ.

(ಲಕ್ಷ್ಮಣ ರಾಮು ಕುರಣೆ )
15 ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.